(*c*) Administratively approved by Government *vide* Government Order No. PWD 3 GIP 64 dated 22/25-11-1969. The foundation stone for Earthen Bund was laid during the Famine period of 1972-73. Further the foundation stone for the Spillway portion was laid on 14th February 1976.

(*d*) Please see Annexure-I. Laid on the Table. * *

(*e*) Please see Annexure-II. Laid on the Table. * *

(*f*) On completion of the project, 88,000 acres of land is proposed to be brought under irrigation and area proposed under sugarcane is 11,200 acres,

(*g*) During 7th Five year Plan. The present estimated cost is 37,58 crores.

MESSAGE FROM THE GOVERNOR-ANNOUNCEMENT

MR. SPEAKER:- I have received a message from the Governor which reads as follows:—

"To the Hon'ble Members of the Legislative Assembly.

I have received with great satisfaction and appreciation the expression of your thanks for the speech with which I opened the First Session of the year 1978 of the Karnataka Legislature"

Supply of the P.A.C proceedings for 1974-76 to the Grover Commission Announcement

MR. SPEAKER:—Secondly, I report to the House that the proceedings of the Public Accounts Committee for the year 1974-76 were made available to the Grover Commission of enquiry as requested by the Commission.

Calling Attention to a matter of urgent Public Importance

re: *Death of elephants during shooting of a film at Nagarahole*

SRI S. S. ARAKERI (Ballolli):—Sir, I call the attention of the Minister for Food and Forest to the tragic death of nine elephants during the shooting of film at Nagarahole.

SRI G. RAMEGOWDA(Minister for Food and Forests)-Sir. In response to calling attention of the Hon'ble Members, I wish to make the following:

---

* * Copies placed in the Karnataka Legislature Library *vide* No. 3 dated 12-6-1978.

In the notice one of the Hon'ble M.L.A. has mentioned that inspite of the recommendation of the Forest Department to refuse the grant of permission to film in the forest area at Nagarahole due to the Minister's influence permission was later accorded as a result of which the Departmental elephants have lost their lives. The Hon'ble M.L.A. has further mentioned that the producer of the film is related to the Minister. The M. L. A. has mentioned that guns and grenades were used to destroy the elephants and that even after the incident neither the Departmental authorities nor the film unit has taken any care to save the animals. The M,L.A has mentioned that even the Ivory of the dead elephants are missing. I feel sorry that the member is thoroughly mis-informed.

The rules governing the issue of permission to film in the State provides for filming in the forest area including the sanctuaries. The anthority to issue the permission is the Director, Film Unit. The comprehensive rules in this regard were formulated by the Govt. in the Home Dept. during 1972 and reiterated during January 1977. The Forest Dept. recommended the exclusion of the sanctuary areas from filming as a general rule with exceptions in the cases in which the story depicted is intimately connected with wild life. This was on the consideration that a large number of people involved in the process of filming cause noise and disturbance in the sanctuary area. Govt. in the Food and Forest Dept, agreed with this view and recommended the deletion of sanctuaries from the list of places for filmshooting to the Home Dept. The Director, Department of Films, requested the Govt. to review this decision on the ground that the cases in which such permissions were accorded were extremely small and only after intensive scrutiny and conviction about the justification, such permissions were accorded by his Department. The Director felt that the natural scenes and spectacular locations in Karnataka would be shown throughout the world through the film media He clarified that during the last 12 years, out of 400 films produced in Karnataka only about 20 films had used forest locations. On this basis the Govt. in the Food and Forest Department reviewed the subject and communicated their decision to the Home Department that there would be no objection to filming in the Wild Life Sanctuaries subject to the conditions placed by the Forest Department. These restrictions refer to nondisturbance to wild life by the use of Loud Speakers, heavy traffic of vehicles, song picturisation, rifle shots, etc. After these views were communicated to the Home Department Govt. in the Home Dept. conveyed the approval to the filming of KART HIKEYA (Hindi colour) in the Bandipur sanctuary and HULIYA HALINA MEVU (Kannada colour) in the Nagarahole sanctuary.

The allegation that the film producer is a relative of mine is incorrect.

I hope the basis on which filming has been permitted in the case of the two producers who had approached the Govt. explained by me as above, will prove the impropriety of the malignant made against me by one of the Hon'ble Members.

The second question refers to the making available of Departmental elephants for filming. This is provided for under the normal Forest rules and has been incorporated in the Karnataka Forest Code and also finds a place in the Govt. Order on filming issued by the Home Dept. It may hence be seen that there need be no question of any influence for securing the Departmental elephants.

23 elephants were used by M/s Raj Kamal productions for filming in the Nagarhole sanctuary area on 20-4-1978. The Divisional Forest Officer had approved the sequences according to which in the clear felled area taken up for replanting during the current rains, the sequence provided for setting fire along a line. Unfortunately the film producer deviated from the sequence and set fire to the collected and stacked firewood along a 'U' shaped line. They had felt that the opening in the neck of the 'U' shape line would provide sufficient space for the elephants to come out. Unfortunately, the fire on three sides and the heavy smoke created panic in the elephants which sought to rush through the fire line itself. The melee resulted in the fall of an elephant as also injury to 11 other elephants. This tragedy had taken place because of the unautorised action of the film producer who immediately thereafter gave an undertaking on stamped paper holding himself totally responsible for the episode. Immediately three Veterinary Doctors were rushed to the site and they have been camping there all along to provide medical care and attention to the injured elephants. The film producer has deposited Rs 1,50,000/- with the Department for the purchase of medicines. They have also agreed to buy any of the elephants which due to injury turn out to be of no use to the Department.

We had sought for the assistance of the World Wilde Life fund to secure medicines not available locally. The Director of Veterinary Services and 5 Professors of the Veterinary College have visited the camp and guided the local veterinary Doctors in the treatment.

I accept that a tragedy has taken place which could have been avoided if either the local Departmental Officials were more careful or the film producer had acted within the authorised limits. It was in this context that the concerned Forest Guard, Forester, Range forest Officer and the Assistant Conservators of Forests of the Territorial

Unit and Wild Life Unit were suspended pending complete investiga tion. It was also in this context that the Government ordered enquiry into the entire episode through a senior Conservator of Forests, not concerned with either the territorial jurisdiction within which the accident has taken place or wild life.

There is a mention regarding destruction of the valuable forests due to the fire. This is not the case. As explained earlier the area in which this incident had taken place was meant to be given a burn for preparing it for raising plantation during the current year's rain. No other wild life was also involved in the tragedy.

There is also a mention that the Departmental authorities have not taken care to save the injured animals. It is also mentioned that the Ivory of the dead elephants are missing. These, to say the least, are far from the truth. We have provided the best of attention that expert advice could achieve to these poor animals. It was only due to this attention that though 12 elephants were injured the casualty so far has been only 4. The tusks of the dead animals have been extracted and taken to stock.

I have explained the facts of the case. I may also mention that I have been extremely grieved by the tragedy that has over-taken the elephants in the incident. Apart from expressing the sorrow I wish to give an assurance that we will see that incidents of this type will not recur, again.

SRI C. M. ARUMUGHAM.—Mr. Speaker, Sir, this film shooting incident and the subsequent death of elephants cannot be taken so lightly. There are two ways in which it should be dealt with. Firstly, it must be probed by a judicial officer and a report submitted to the House so that members will know what exactly has taken place and whether there has been any irresponsible behaviour on the part of the Forest Department or the Home Department in entering into a contract with the film producers. I do not want to make any allegation against the Minister on the ground that he is related to the producer. That is not at all the point at issue. I want to know how this contract was signed. After it was agreed to an order must have been issued. Who was the officer who issued it? It cannot be the local officer but must be the Chief Conservator of Forests or the Commissioner and Secretary to Government, Home Department. So, there must be a judicial probe.

Secondly, if the Hon'ble Minister agrees, he can appoint a small committee of the Legislature which can go, visit the place and submit a report to the House. Without going into the merit of the case, if elephants could die what about small deers and birds ? There is a

scientific theory that if there is a fire in the forest it will destroy plants also. So, I submit that there should be a judicial prob or a probe by a small committee of the legislature and they should submit a report. This matter cannot be treated so lightly through a Call Attention Motion.

ಶ್ರೀ ಪಿ. ರಾಂದೇವ್. – ಅಧ್ಯಕ್ಷರೇ, ಮಾನ್ಯ ಆರ್ಮುಗಂ ಅವರು ಹೇಳಿದಂತೆ ನಾಗರಹೊಳೆಯಲ್ಲಿ ಆಗಿರತಕ್ಕ ಅಪಘಾತದ ಬಗ್ಗೆ ತನಿಖೆಗಾಗಿ ಈ ಸಭೆಯ ಸಮಿತಿಯನ್ನು ತಾವು ಮಾಡಬಹುದು. ನಾನು ಮಾನ್ಯ ಆರ್ಮುಗಂ ಅವರು ಹೇಳಿದ ಮಾತನ್ನು ಸಮರ್ಥನೆ ಮಾಡುತ್ತಾ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಇದು ಬಹಳ ಗಹನವಾದ ವಿಚಾರ. ಲಘುವಾಗಿ ಬರೀ ಚರ್ಚೆ ಮಾಡಿ ಬಿಡತಕ್ಕ ವಿಚಾರ ಅಲ್ಲ. ಮಾನ್ಯ ಮಂತ್ರಿಗಳು ಅಧಿಕಾರಿಯೊಬ್ಬರ ಮುಖಾಂತರ ಇದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದಾರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಇದರ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕು, ಮತ್ತು ಈ ಸಭೆಯ ಒಂದು ಸಮಿತಿ ಅಲ್ಲಿ ಹೋಗಿ ನೋಡಿಕೊಂಡು ಬರಬೇಕು. ಆನೆಗಳು ಬೆಂಕಿಯಲ್ಲಿ ಬಿದ್ದು ಸಾಯುತ್ತಾ ಇರುವಾಗ ಕೂಡ ಚಿತ್ರೀಕರಣ ಮಾಡಿದ್ದಾರೆ. ಅವರೇನು ಚಿತ್ರೀಕರಣ ಮಾಡಿದ್ದಾರೆ ಅದನ್ನು ಕೂಡ ಈ ಸಮಿತಿ ಸದಸ್ಯರಿಗೆ ತೋರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಸ್. ಆರಕೇರಿ.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ ಇದರಿಂದ ನಿಜವಾಗಿಯೂ ಕರ್ನಾಟಕದ ಜನತೆಗೆ ಸಮಾಧಾನವಾಗುವುದಿಲ್ಲ. ಮಾನ್ಯ ಸದಸ್ಯರಾದ ಆರ್ಮುಗಂ ಅವರು ಹೇಳಿದ ಹಾಗೆ ನ್ಯಾಯಾಂಗ ತನಿಖೆ ಆಗಬೇಕು. ಇದಕ್ಕೆ ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಹೊಣೆಗಾರರೋ, ಅಥವಾ ಸರ್ಕಾರ ಹೊಣೆಗಾರರೊ ಅಥವಾ ಯಾರು ಹೊಣೆಗಾರರು ? ಮತ್ತು ನಿರ್ಮಾಪಕರನ್ನು ಯಾವ ರೀತಿ ಕಾನೂನಿನ ಚೌಕಟ್ಟಿನಲ್ಲಿ ತಂದು ಸರಿಯಾದಂಥ ಶಿಕ್ಷೆ ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ಹಾಗೂ ಈ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡುವಂತೆ ವ್ಯವಸ್ಥೆ ಮಾಡಬೇಕು ಎಂದು ಈ ಮನೆಯ ಸದಸ್ಯನಾಗಿ ನಾನು ಸರ್ಕಾರವನ್ನು ಒತ್ತಾಯಪಡಿಸುತ್ತಿದ್ದೇನೆ.

ಶ್ರೀ ಎಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಹೇಳಿಕೆಯಲ್ಲಿ ಮೊದಲನೇ ಪ್ಯಾರಾದಲ್ಲಿ ಇರತಕ್ಕ ವಿಷಯಗಳ ಬಗ್ಗೆ ನಿಲುವಳಿ ತಂದಿದ್ದವನು ನಾನು: ನಿರ್ಮಾಪಕರು ಮಾನ್ಯ ಮಂತ್ರಿಗಳಿಗೆ ಬಂದುಗಳಾಗಿದ್ದಾರೆ ಎಂದು ಹೇಳತಕ್ಕ ವಾದವನ್ನು ನಾನು ಮಾಡಿದ್ದೆ. ಅವರು ಇಲ್ಲ ಎಂದು ಹೇಳಿದ್ದಾರೆ. ಅವರು ತಮ್ಮ ಸ್ಟೇಟ್‌ಮೆಂಟಿನಲ್ಲಿ ಒಂದು ಕಡೆ The allegation that the film producer is a relative of mine is incorrect ಎಂದು ಹೇಳಿದ್ದಾರೆ. ಇನ್ನೊಂದು ಕಡೆ two producers who had approached the Government explained by me as above, will prove the impropriety of the malignant made against me by one of the Hon'ble Members ಎಂದು ಹೇಳಿದ್ದಾರೆ. ಅಂದರೆ ಒಬ್ಬರು ನಿರ್ಮಾಪಕರು ಬಂಧುಗಳಲ್ಲ ಇನ್ನೊಬ್ಬ ನಿರ್ಮಾಪಕರು ಬಂಧುಗಳಿರಬಹುದು ಎಂಬ ಅರ್ಥ ಬರುತ್ತದೆ. ಇಲ್ಲಿ ನಮ್ಮ ದೃಷ್ಟಿ ಮಾನ್ಯ ಮಂತ್ರಿಗಳ ಮೇಲೆ ಅಪವಾದ ತರಬೇಕು ಎಂಬುದಲ್ಲ. ಜನರ ಮನಸ್ಸಿನಲ್ಲಿರುವ ಭಾವನೆ ಏನಿದೆ ಎಂಬುದನ್ನು ಹೇಳಿದ್ದೇವೆ. ಆ ಚಿತ್ರದ ಪ್ರೊಡ್ಯೂಸರ್ ಆಗಿರಬಹುದು, ಡೈರೆಕ್ಟರ್ ಆಗಿರಬಹುದು, ಅಥವಾ ಫೈನಾನ್ಸರ್ ಆಗಿರಬಹುದು, ಚಿತ್ರ ತಯಾರಿಕೆಗೆ ಸಂಬಂಧಪಟ್ಟ ಯಾವುದೇ ವ್ಯಕ್ತಿ ಮಾನ್ಯ ಮಂತ್ರಿಗಳಿಗೆ ಸಂಬಂಧಿಗಳಾಗಿರಬಹುದು, ಆದ್ದರಿಂದ ಅವರ ಪ್ರಭಾವದ ಮೇಲೆ ಚಿತ್ರೀಕರಣಕ್ಕೆ ಅವಕಾಶ ಕೊಟ್ಟಿದ್ದಾರೇನೋ ಎಂಬ ಭಾವನೆಯನ್ನು ಆ ಕ್ಷೇತ್ರದ ಜನ ವ್ಯಕ್ತಪಡಿಸುತ್ತಾ ಇರುವುದರಿಂದ ಇದರ ಬಗ್ಗೆ ಸರಿಯಾದ ತಿಳುವಳಿಕೆ ಕೊಟ್ಟಿದ್ದರೆ ಚೆನ್ನಾಗಿತ್ತು. ಪ್ರೊಡ್ಯೂಸರ್ ರಾಜಕಮಲ್ ಪ್ರೊಡಕ್ಷನ್ಸ್ ಎಂದು ಮಾತ್ರ ಹೇಳಿದ್ದಾರೆ. ಈ ಬಗ್ಗೆ ಸರಿಯಾದ ವಿವರಣೆ ಕೊಡಬೇಕಾಗಿತ್ತು. ಎರಡನೆಯದಾಗಿ ಈಗ ಆನೆಗಳು ಸತ್ತಿರುವುದರಿಂದ ನಷ್ಟ ಆಗಿದೆ ಎಂಬ ಪ್ರಶ್ನೆ ಮಾತ್ರ ಅಲ್ಲ, ಆನೆಗಳು ಸತ್ತಿರುವುದಕ್ಕಿಂತ ಮುಖ್ಯವಾಗಿ ಚಿತ್ರೀಕರಣದ ಸಮಯದಲ್ಲಿ ಅಲ್ಲಿ ಬೆಂಕಿ ಹಾಕಿದ್ದರಿಂದ ಸಾಕಷ್ಟು ನಷ್ಟ ಆಗಿದೆ. ಅಲ್ಲಿ ನಷ್ಟ ಎಷ್ಟು ಆಗಿದೆ, ಇದಕ್ಕೆ ಕಾರಣರು ಯಾರು ಎಂಬ ಬಗ್ಗೆ ನಾನು ವಿವರಣೆ ಕೇಳಿದ್ದೆ. ಆದರೆ ಈ ಹೇಳಿಕೆಯಲ್ಲಿ ಸರಿಯಾದ ವಿವರಣೆ ಇಲ್ಲ. ಅಲ್ಲಿ ''ಯು'' ಷೇಪ್‌ನಲ್ಲಿ ಬೆಂಕಿ ಹಾಕಿದ್ದರು ಎಂದು ಹೇಳಿದ್ದಾರೆ. ಆದರೆ ಅಲ್ಲಿ ಬೆಂಕಿ

ಹಾಕುವುದಕ್ಕೆ ಅವಕಾಶ ಕೊಡುವವರೆಗೆ ಅಧಿಕಾರಿಗಳು ಏನು ಮಾಡುತ್ತಿದ್ದರು, ಆಲ್ಲಿ ಬೆಂಕಿ ಹಾಕಿ ೩೦-೪೦ ಆನೆಗಳಿಗೆ ಗಾಯವಾಗುವಷ್ಟರ ಮಟ್ಟಿಗೆ ಬೆಂಕಿ ಹಾಕುವುದಕ್ಕೆ ಅವಕಾಶ ಯಾತಕ್ಕೆ ಕೊಟ್ಟರು ? ಇದೆಲ್ಲಕ್ಕಿಂತ ಮುಖ್ಯವಾಗಿ ನಿರ್ಮಾಪಕರು ಮೊದಲು ಚಿತ್ರೀಕರಣಕ್ಕೆ ಪರ್ಮಿಷನ್ ಬೇಕು ಎಂದು ಸರ್ಕಾರವನ್ನು ಕೇಳಿದಾಗ ಅರಣ್ಯ ಇಲಾಖೆಯವರು ಆಗುವುದಿಲ್ಲ ಎಂದು ಹೇಳಿದರು. ನಂತರ ಗೃಹ ಶಾಖೆಯವರೂ ಕೂಡ ಆಗುವುದಿಲ್ಲ ಎಂದು ಹೇಳಿದ್ದಾರೆ. ಆನಂತರವೂ ಕೂಡ ಯಾರ ಒತ್ತಾಯದ ಮೇಲೆ ಪರ್ಮಿಷನ್ ಕೊಟ್ಟಿದ್ದಾರೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಹಾಗಾದರೆ ಈ ವಿಷಯದಲ್ಲಿ ನಡೆದಿರತಕ್ಕ ವ್ಯವಹಾರಗಳ ಬಗ್ಗೆ ಮೊದಲಿನಿಂದ ಈವರೆಗೂ ಏನೇನು ಪತ್ರ ವ್ಯವಹಾರ ನಡೆದಿದೆ ಆ ಪತ್ರಗಳನ್ನೆಲ್ಲಾ ಸಭೆಯ ಮುಂದೆ ಇಡಲಿ. ಆನೆಗಳ ದಂತವನ್ನು ಸ್ಟಾಕ್‌ಗೆ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ, ಎಷ್ಟು ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಆದ್ದರಿಂದ ಒಟ್ಟಿನಲ್ಲಿ ಈ ಬಗ್ಗೆ ನ್ಯಾಯಾಂಗ ತನಿಖೆಯಾಗಿ ವಿಚಾರಣೆ ಆಗಬೇಕಾದ್ದು ಅವಶ್ಯಕತೆ ಇದೆ. ಚಿತ್ರೀಕರಣಕ್ಕೆ ಸಂಬಂಧಪಟ್ಟಂತೆ ಮೊದಲಿನಿಂದ ಯಾರು ಆರ್ಜಿ ಹಾಕಿದ್ದರು, ಅದಕ್ಕೇನು ಉತ್ತರ ಕೊಟ್ಟರು, ಯಾರ ಪ್ರಭಾವದ ಮೇಲೆ ಅವರಿಗೆ ಅನುಮತಿ ಸಿಕ್ಕಿತು, ಯಾವ ಯಾವ ಇಲಾಖೆಯವರು ಏನೇನು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಮೊದಲಿನಿಂದ ನಡೆದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡುವ ಅಗತ್ಯ ಇದೆ. ಇದರ ಜೊತೆಗೆ ಪ್ರೊಡ್ಯೂಸರ್ಸ್, ಡೈರೆಕ್ಟರುಗಳ ವಿವರವನ್ನೂ ಈ ಸಭೆಯ ಮುಂದೆ ಇಡಬೇಕು ಎಂದು ಪೂಜ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಆರ್ಮುಗಂ ಅವರು ಹೇಳಿದ್ದನ್ನು ನೀವು ಅನುಮೋದಿಸುತ್ತೀರೋ ಅಥವಾ ಸ್ಪಷ್ಟೀಕರಣ ಕೇಳುತ್ತೀರೋ?

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ವೈಯಕ್ತಿಕವಾಗಿ ಕ್ಲಾರಿಫಿಕೇಷನ ಕೇಳುವುದಿದೆ. ಅದನ್ನು ಕೇಳುತ್ತೇನೆ. ಮಾನ್ಯ ಮಂತ್ರಿಗಳು ಈಗ ಸ್ಟೇಟ್‌ಮೆಂಟ್ ಮಾಡಿದ್ದಾರೆ. ನಾನು ಕೊಟ್ಟಂಥ ಕಾಲಿಂಗ್ ಅಟೆನ್‌ಷನ್ ಮೋಷನ್‌ಗೂ ಇಲ್ಲಿ ಬಂದಿರತಕ್ಕ ಉತ್ತರಕ್ಕೂ ಹೊಲಿಸಿದರೆ ಇದು ಬಹುಶಃ ಬೇರೇನೇ ಇದೆ. ಮಾನ್ಯ ಮಂತ್ರಿಗಳು ವೈಯಕ್ತಿಕವಾಗಿ ವಿವರಣೆ ಕೊಡುತ್ತಾ ಅವರಿಗೂ ನನಗೂ ಸಂಬಂಧ ಇಲ್ಲ ಎಂದು ಹೇಳಿದ್ದಾರೆ. ಇದು ರಾಜಕೀಯವಾಗಿ ಪರಿಗಣಿಸತಕ್ಕ ಸಮಸ್ಯೆ ಅಲ್ಲ. ರಾಮೇಗೌಡರ ವೈಯಕ್ತಿಕ ವಿಷಯದ ಬಗ್ಗೆ ಹೇಳುವುದಾದರೆ ಅವರು ಒಬ್ಬ ಪ್ರಾಮಾಣಿಕ ವ್ಯಕ್ತಿ ಎಂಬ ಬಗ್ಗೆ ಯಾರೂ ಅನುಮಾನಪಡತಕ್ಕ ಅವಶ್ಯಕತೆ ಇಲ್ಲ. ಅವರು ಈಗ ಕಾಲಿಂಗ್ ಅಟೆನ್‌ಷನ್‌ಗೆ ಉತ್ತರ ಕೊಟ್ಟಿದ್ದಾರೆ, ಈಗಾಗಲೇ ವಿಚಾರಣೆಗಾಗಿ ಒಬ್ಬರನ್ನು ನೇಮಿಸಿದ್ದೇವೆ ಎಂದು ಹೇಳಿದ್ದಾರೆ. ಆವರ ವರದಿ ಏನಾದರೂ ಮಾನ್ಯ ಮಂತ್ರಿಗಳ ಕೈ ಸೇರಿದೆಯೇ, ಆ ರಿಪೋರ್ಟ್ ನಿಮ್ಮ ಕೈಗೆ ಸೇರಿದ್ದರೆ ಅದರ ಸಾರಾಂಶ ಏನಿದೆ ಎಂಬುದನ್ನು ಹೇಳಬೇಕು. ನಾನು ನಿನ್ನೆ ಕೂಡ ಆ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ಬಂದಿದ್ದೇನೆ. ಇವತ್ತು ಈ ಪ್ರಕರಣ ನಡೆಯುವಾರದಾಗಿತ್ತು, ದುರಾದೃಷ್ಟವಶಾತ್ ನಡೆದು ಹೋಗಿದೆ, ಬಹುಶಃ ಇದನ್ನು ಒಂದು ಆಕ್ಸಿಡೆಂಟ್ ಎಂದು ಪರಿಗಣಿಸಬಹುದು, ಒಂದು ಆಕ್ಸಿಡೆಂಟ್ ಆಗಿದೆ.

ಈ ರೀತಿ ಆಗಬೇಕಾದರೆ ಇದರಲ್ಲಿ ಮೇಲಿನ ಅಧಿಕಾರಿಗಳು ಯಾರಾದರಾಗಲೀ ಅಥವಾ ಬೇರೆ ಯಾರಾದರೂ ಅಧಿಕಾರಿಗಳು ಶಾಮೀಲಾಗಿದ್ದರೆ ಎನ್ನತಕ್ಕ ವಿವರಣೆಯನ್ನು ಈ ಸದನಕ್ಕೆ ನೀಡತಕ್ಕದ್ದು ಅತ್ಯಂತ ಅವಶ್ಯಕವಾಗಿದೆ. ತಾವು ಈಗಾಗಲೇ ಹೇಳಿದ್ದೀರಿ, ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ ಮತ್ತು ಆ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ ಎಂದು. ನೀವು ತೆಗೆದುಕೊಳ್ಳತಕ್ಕ ಕ್ರಮದಿಂದ ಕರ್ನಾಟಕ ರಾಜ್ಯದಲ್ಲಿ ನಡೆಯತಕ್ಕ ಚಿತ್ರೀಕರಣಕ್ಕೆ ಯಾವುದೇ ವಿಧವಾದ ಧಕ್ಕೆ ಆಗಬಾರದೆಂಬ ಆಶಯ ಇದೆ. ಇವತ್ತು ಕನ್ನಡ ಚಲನ ಚಿತ್ರದ ಬಗ್ಗೆ ಅಷ್ಟೊಂದು ಉತ್ಸಾಹಗಳನ್ನು ಇಟ್ಟುಕೊಂಡು ರಾಜ್ಯದಲ್ಲಿ ಚಿತ್ರೀಕರಣ ಆಗಬೇಕೆಂಬ ದೃಷ್ಟಿಯನ್ನಿಟ್ಟುಕೊಂಡಿರುವುದರಿಂದ ತಾವು ಆ ರಿಪೋರ್ಟನ್ನು ಇಂದು ಸದನಕ್ಕೆ ಮುಂಡಿಡಬೇಕು. ಆ ರಿಪೋರ್ಟಿನಿಂದ ತೃಪ್ತಿಯಾಗದಿದ್ದರೆ ನಂತರ ಸದಸ್ಯರ ಸಮಿತಿಯು ಪರಿಶೀಲನೆ ನಡೆಸಬಹುದೆಂದು ಭಾವಿಸಿದ್ದೇನೆ. ರಿಪೋರ್ಟ್ ಏನಿದೆ ಆದರಲ್ಲಿ ಆವರು ಕೊಟ್ಟಿರತಕ್ಕ ಫೈಂಡಿಂಗ್ಸ್ ಏನು ಎನ್ನತಕ್ಕದ್ದನ್ನು ಅವಶ್ಯವಾಗಿ ನೋಡಬೇಕು. ಯಾರೋ ೨ ಮಂದಿ ಪ್ರೊಡ್ಯೂಸರ್ಸ್ ಹೆಸರುಗಳನ್ನು ತಿಳಿಸಿದ್ದೀರಿ. ಅವರಿಂದ ಆದ ನಷ್ಟ ಎಷ್ಟು? ಒಂದು ಆನೆ ಹೋದರೆ ೧೦-೨೦-೩೦ ಸಾವಿರ ರೂಪಾಯಿ ನಷ್ಟ.....

3-00 P.M.

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಗೆ ಸಚಿ ಮಾಡಿರುವ ಸದಸ್ಯರುಗಳು ಒಂದೆರಡು ಸ್ಪಷ್ಟೀಕರಣಗಳನ್ನು ಕೇಳಬಹುದು.

ಶ್ರೀ ಸಿ. ಎಂ. ಇಬ್ರಾಹಿಂ.—ನಾನೂ ಕೂಡ ಸ್ಪಷ್ಟೀಕರಣವನ್ನೇ ಕೇಳುತ್ತಿದ್ದೇನೆ. ಒಂದು ಆನೆಗೆ ಸರ್ಕಾರಿ ರೇಟ್ ಎಷ್ಟು ಮತ್ತು ಪ್ರೊಡ್ಯೂಸರ್ ಕೊಟ್ಟಿರತಕ್ಕದ್ದು ಎಷ್ಟು? ಇವತ್ತು ಒಂದೂವರೆ ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಹೇಳಿದಿರಿ. ಎರಡನೆಯದಾಗಿ ಫೈರ್ ವುಡ್‌ಗೆ ಬೆಂಕಿ ಹಚ್ಚಲಾಗಿ ನಷ್ಟವಾಗಿದೆ ಎಂದು ಹೇಳಿದಿರಿ. ಈ ಬಗ್ಗೆ ಪ್ರೊಡ್ಯೂಸರ್ಸ್ ಏನು ಹೇಳಿದ್ದಾರೆ? ಇದಕ್ಕೆ ಮಾನ್ಯ ಮಂತ್ರಿಗಳ ಹತ್ತಿರದ ಸಂಬಂಧಿಕರೊಬ್ಬರು ಕಾರಣರು ಎಂದು ಮಾನ್ಯ ಗಂಗಾಧರಸ್ವಾಮಿಯವರು ಹೇಳಿದ್ದಾರೆ. ಆದುದರಿಂದ ಒಟ್ಟಿನಲ್ಲಿ ಹೇಳುವುದಾದರೆ, ಈ ಸಂದರ್ಭದಲ್ಲಿ ಕೆಲವು ಅಧಿಕಾರಿಗಳು ಮಾಡುತ್ತಿರತಕ್ಕ ದುರ್ವ್ಯವಹಾರದಿಂದ ನಿಮ್ಮ ವ್ಯಕ್ತಿತ್ವಕ್ಕೆ ಧಕ್ಕೆ ಬಾರದ ಹಾಗೆ ನಡೆಸಿಕೊಂಡು ಹೋಗಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಈ ದುರ್ಘಟನೆ ಬಹಳ ಖಂಡನೀಯವಾದುದು. ಆ ಮೂಕ ಪ್ರಾಣಿಗಳ ವೇದನೆಯನ್ನು ಈ ಹೊತ್ತಿನಲ್ಲಿ ಆಳೆಯುವುದಕ್ಕೆ ಆಗುವುದಿಲ್ಲವೆಂದು ನನಗನ್ನಿಸುತ್ತದೆ. ಅವತ್ತಿನ ಆ ಅನಾಹುತಕ್ಕೆ ಮುಖ್ಯ ಕಾರಣ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳೊಬ್ಬರು ಆ ಸಂದರ್ಭದಲ್ಲಿಲ್ಲದೆ ಅವರ ಒಂದು ಜವಾಬ್ದಾರಿಯನ್ನು ಸಣ್ಣ ಕೆಲಸದವರಿಗೆ ಬಿಟ್ಟಿದ್ದುದು. ಆ ಬಗ್ಗೆ ಒಂದು ವಿವರಣೆ ಬೇಕು. ಎರಡನೆಯದಾಗಿ, ಬೆಂಕಿ ಹಾಕುವಾಗ ಟೆಕ್ನಿಕಲ್ ಆಗಿ ನೇರವಾಗಿ ಹಾಕುವುದಕ್ಕೆ ಬದಲಾಗಿ 'ಯು' ಷೇಪ್‌ನಲ್ಲಿ ಹಾಕಿ ಎಂಟ್ರೆನ್ಸ್ ಕಡೆ ಫಿಲಂನವರು ದೊಡ್ಡ ಲೈಟನ್ನು ಇಟ್ಟುಕೊಂಡು ಷೂಟಿಂಗ್ ಮಾಡುತ್ತಿದ್ದಾಗ ಆನೆಗಳು ಬೆದರಿ ಬೆಂಕಿ ಕಡೆ ಹಾರಿ ಹೋಗುವುದಕ್ಕೆ ಅವಕಾಶವಾಯಿತು. ಆ ಸಂದರ್ಭದಲ್ಲಿ ತಿಳುವಳಿಕೆ ಇರತಕ್ಕ ಹಾಗೂ ಜವಾಬ್ದಾರಿ ಇರತಕ್ಕ ಅಧಿಕಾರಿಗಳಿದ್ದು ಆಗಲೇ ಸೂಕ್ತ ಕ್ರಮ ಕೈಗೊಂಡಿದ್ದರೆ ಆ ಅನಾಹುತವಾಗುತ್ತಿರಲಿಲ್ಲವೆಂದು ಕೆಲವರು ಹೇಳುತ್ತಾರೆ. ಆ ಫಿಲಂ ಯೂನಿಟ್ಟಿಗೆ ಪರ್ಮಿಷನ್ ಕೊಡುವಾಗ ಮೊದಲು ಅರಣ್ಯ ಇಲಾಖೆಯವರು ಖಂಡಿತವಾಗಿ ಆಗುವುದಿಲ್ಲವೆಂದು ಹೇಳಿದ್ದಕ್ಕೆ ಹೋಂ ಡಿಪಾರ್ಟ್‌ಮೆಂಟಿನಿಂದ ಅವರಲ್ಲಿಯೂ ಮುಖ್ಯವಾಗಿ ಫಿಲಂ ಯೂನಿಟ್ ಡೈರೆಕ್ಟರ್ ಬಂದು ಇಂಟರ್‌ಫೀಯರ್ ಆಗಿ ಒತ್ತಾಯ ಮಾಡಿ ಕೊಡಿಸಿದರೆಂದು ತಿಳಿದು ಬಂದಿದೆ. ಆ ಬಗ್ಗೆಯೂ ವಿವರಣೆ ಬೇಕು. ಇದರಲ್ಲಿ ಪ್ರಾಣಿಗಳ ನಷ್ಟ ಮತ್ತು ಅರಣ್ಯ ಸಂಪತ್ತಿಗೆ ಆಗಿರತಕ್ಕ ನಷ್ಟ, ಎಲ್ಲ ಇರುವುದರಿಂದ ಮಾನ್ಯ ಮಂತ್ರಿಗಳು ಕೇವಲ ಆ ಇಲಾಖೆಗೆ ಸಂಬಂಧಪಟ್ಟವರನ್ನು ತನಿಖೆ ಮಾಡುವುದಕ್ಕೆ ಬದಲಾಗಿ ಒಂದು ನಿಷ್ಪಕ್ಷಪಾತವಾದ ಜುಡಿಷಿಯಲ್ ಅಥಾರಿಟಿಯಿಂದ ತನಿಖೆ ನಡೆಯುವುದಕ್ಕೆ ಅವಕಾಶವಾಗತಕ್ಕದ್ದು ಅಗತ್ಯವಾಗಿದೆ. ಈ ಪ್ರಕರಣದಲ್ಲಿ ದೊಡ್ಡ ದೊಡ್ಡವರು ಸೇರಿರುವುದರಿಂದ ಇದರ ತನಿಖೆ ಸಣ್ಣವರಿಂದ ಆಗುವುದಿಲ್ಲ. ಫಿಲಂ ಶೂಟಿಂಗ್‌ಗೆ ಅನುಮತಿಯನ್ನು ಕೊಡಲು ಟೆಕ್ನಿಕಲ್ ಆಸ್ಪೆಕ್ಟ್‌ನವರು ಮತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಆಗುವುದಿಲ್ಲವೆಂದರೂ ಕೂಡ ಯಾವ ಕಡೆಯಿಂದ ಒತ್ತಾಯ ಬಂದಿತೆಂಬ ಬಗ್ಗೆ ವಿವರಣೆ ಕೊಡಬೇಕೆಂದು ಕೇಳುತ್ತೇನೆ ಮತ್ತು ಈ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಅಗತ್ಯವಾಗಿ ಆಗಬೇಕೆಂದು ಒತ್ತಾಯ ಮಾಡುತ್ತೇನೆ.

SRI JEEVARAJ ALVA.—According to the Minister's statement, this episode is a case of accident. In the light of the statement may I request the Minister to assure that the action taken against the officials of the Forest Department will be revoked. The second question is, there has been a concrete effort to malign or create an ugly scene and in the last few months there has been an attempt to prove that this was a case of favourtism and the Minister has unnecessarily intervened on behalf of the person who has been associated with the film. I request that this particular incident should not lead the Government to ban filming or shooting of films in sanctuaries or jungles because the Kannada film industry is in an infant stage and this particular industry needs all the encouragement.

I request the Minister to assure that this particular episode which is an unfortunate one will not result in banning of filming or shooting of films in sanctuaries or jungles ?

ಶ್ರೀ ಪಿ. ರಾಮ್‌ದೇವ್.—ಅಲ್ಲಿ ವಾಹನಗಳು ಹೋಗಬಾರದು. ಲೌಡ್ ಸ್ಪೀಕರ್ ಹಾಕಬಾರದೆಂದು ಇಂಥಲ್ಲಾ ನಿಬಂಧನೆಗಳಿರುವಾಗ ಜಿಂಕೆ ಹಾಕುವುದಕ್ಕೆ ಹೇಗೆ ಅನುಮತಿಯನ್ನು ಕೊಟ್ಟರು ?

SRI A. LAKSHMISAGAR.—I once again read the statement made by the Minister. I want to have a clarification on only one point. For the blunder the Minister committed in according sanction for shooting of the film against the opinion of the Forest Department, what is the meaning in keeping the subordinate officials under suspension. Why does he want to penalise or terrorise the subordinate officials of the Forest Department who are not responsible for this episode and shift the blame on them? He himself is responsible for according permission overriding the objections of the department. What is the mistake committed by the officials ? Is there anything in the statement which occasions for taking action against the officials and keep them under suspension? Why does he resort to this kind of action against the Government officials who are not responsible for according sanction to shoot the film? Will the Minister answer this question ?

SRI MICHAEL B. FERNANDES.—Arising out of the experience, would the Government servants from now on be free to refuse to follow such instructions given either orally or in writing ? Will the Government allow officers to defy such instructions in future ? Otherwise they have to act according to such instructions and face the music by being kept under suspension.

ಶ್ರೀ ಜಿ. ರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದಂಥಾ ಎಲ್ಲಾ ವಿಚಾರಗಳನ್ನೂ ಗಮನಿಸಿದ್ದೇನೆ ಮತ್ತು ಆ ಬಗ್ಗೆ ಒಂದೊಂದಕ್ಕೂ ನಿಶ್ಚಲವಾದ ಉತ್ತರಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

SRI A. LAKSHMISAGAR.—In view of the discussion, may I have an assurance from the Hon'ble Minister that the order of suspension will be revoked immediately ?

ಶ್ರೀ ಜಿ. ರಾಮೇಗೌಡ.— ಮೊದಲನೆಯದಾಗಿ ಹೇಳಬೇಕಾದರೆ ಈ ಫಿಲಂ ಯೂನಿಟ್‌ನಲ್ಲಿ ಇರುವ ಯಾವ ಪ್ರೊಡ್ಯೂಸರ್ಸ್ ಆಗಲಿ ಅಥವಾ ಡೈರೆಕ್ಟರ್‌ಗಳಾಗಲಿ ನನಗೆ ಯಾವ ವಿಧವಾದ ಸಂಬಂಧವೂ ಇಲ್ಲ. ಇದರಲ್ಲಿ ನಷ್ಟ ಏನಾಗಿದೆ ಎನ್ನುವ ಒಂದು ವಿಚಾರವನ್ನು ಮಾನ್ಯ ಸದಸ್ಯರುಗಳು ಎತ್ತಿದ್ದಾರೆ. ನನಗೆ ದೊರೆತಿರುವ ಅಂಕಿಅಂಶಗಳ ಪ್ರಕಾರ ಆನೆಗಳ ನಷ್ಟ ಮತ್ತು ಔಷಧಿಗಳ ಖರ್ಚು ಎಲ್ಲಾ ಸೇರಿ ೧,೪೫,೪೬೫ ರೂಪಾಯಿ ಖರ್ಚಾಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಫಿಲಂನವರು ೧,೫೦,೦೦೦ ರೂಪಾಯಿಗಳನ್ನು ಇದಕ್ಕೆ ಈಗಾಗಲೇ ಡಿಪಾಸಿಟ್ ಮಾಡಿದ್ದಾರೆ. ಮೊದಲು ಆನೆ ಸಾಯುವುದಕ್ಕೆ ಮುಂಚೆ ೧ ಲಕ್ಷ ರೂಪಾಯಿ ಡಿಪಾಸಿಟ್ ಮಾಡಿದ್ದರು ನಂತರ ೫೦ ಸಾವಿರ ರೂಪಾಯಿ ಡಿಪಾಸಿಟ್ ಮಾಡಿದ್ದಾರೆ.

ಶ್ರೀ ಎಸ್. ಎಸ್. ಅರಕೆರೆ.—ಸ್ವಾಮಿ, ಆನೆಗಳ ಬೆಲೆ ಎಷ್ಟೆಷ್ಟು ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಜಿ. ರಾಮೇಗೌಡ. —ಆನೆಗಳ ಬೆಲೆ ಹೇಳಬೇಕಾದರೆ ಒಂದೊಂದಕ್ಕೂ ಒಂದೊಂದು ರೀತಿಯ ಬೆಲೆ ಇರುತ್ತದೆ. ಆದರ ಮಯಸ್ಸಿನ ಮೇಲೆ ಹೆಣ್ಣಾನೆಗೆ ಇಷ್ಟು ಮತ್ತು ಗಂಡಾನೆಗೆ ಇಷ್ಟು ಅಂತ ಬೆಲೆ ಒಂದೊಂದು ತರಹ ಇದೆ. ಅದನ್ನೆಲ್ಲಾ ಹೇಳಬೇಕಾದರೆ ಮಾನ್ಯ ಅಧ್ಯಕ್ಷರು ಕಾಲಾವಕಾಶ ಕೊಟ್ಟರೆ ಹೇಳುತ್ತೇನೆ. ಈವಾಗ ಇದಕ್ಕೆ ಒಟ್ಟು ಎಷ್ಟು ಖರ್ಚಾಗಿದೆ ಅನ್ನುವುದನ್ನು ಹೇಳಬೇಕಾದರೆ ಫಾರೆಸ್ಟ್ ಕೋಡ್ ಪ್ರಕಾರ ಪ್ರತಿಯೊಂದು ಆನೆಗೂ ದಿನಕ್ಕೆ ೧೫೦ ರೂಪಾಯಿ, ಮಾವಟಿಗೆ ೨೫ ರೂಪಾಯಿ ಮತ್ತು ಅದರ ತಿನಸುಗಳಿಗೆ ೨೫ ರೂಪಾಯಿ ಕೊಡಬಹುದು ಅಂತ ಇದೆ. ಆ ಪ್ರಕಾರ ಲೆಕ್ಕಾಚಾರ ಮಾಡಿ ಕೊಡಬೇಕಾಗಿದೆ. ಇನ್ನು ಇದರ ಔಷಧಿಗಳಿಗೆ ಎಷ್ಟು ಖರ್ಚಾಗಿದೆ ಅನ್ನುವುದನ್ನು ಹೇಳಬೇಕಾದರೆ ನಮ್ಮ ಒಂದು ಅಂದಾಜು ಪ್ರಕಾರ ೩೮,೪೮೭ ರೂಪಾಯಿ ಖರ್ಚಾಗಿದೆ ಎಂದು ಗೊತ್ತಾಗಿದೆ. ಅದಕ್ಕೆ ಬೇಕಾದಂಥಾ ಪೆಡಿಸನ್ಸ್, ಫೌಡರ್, ಷುಗರ್‌ಕೇನ್ ಜೇನುತುಪ್ಪ ಮುಂತಾದವಕ್ಕೆ ಖರ್ಚಾಗಿದೆ. ಇದರ ಜೊತೆಗೆ ಲಗ್ಗೇಜ್ ಚಾರ್ಜು ೯ ರೂಪಾಯಿ ಬೇರೆ ಹಾಕಿದ್ದಾರೆ. ಇದಲ್ಲದೆ ಇದರ ಟಸ್ ವ್ಯಾಲ್ಯೂ ಈ ೩ ಆನೆಗಳು ಸಾಯುವುದಕ್ಕೆ ಮುಂಚೆ ಇಷ್ಟು ಖರ್ಚಾಗಿದೆ. ಹೆಮ್ಮಲ್ಟನ್ ಆನೆಗೆ ೧೮,೫೦೦ ರೂಪಾಯಿ, ಸಾವಿತ್ರಿ ಅನ್ನುವ ಆನೆಗೆ ೬ ಸಾವಿರ ರೂಪಾಯಿ ಐರಾವತ ಅನ್ನುವ ಆನೆಗೆ ೨೦ ಸಾವಿರ ರೂಪಾಯಿ ಖರ್ಚಾಗಿದೆ. ಈ ರೀತಿಯಾಗಿ ಎಲ್ಲಾ ಆನೆಗಳಿಗೂ ಸೇರಿ ೪೭,೮೬೦ ರೂಪಾಯಿ ಖರ್ಚು ಬಂದಿದೆ. ಇದರ ಟಸ್ಕ್ ವ್ಯಾಲ್ಯೂ ೧ ಲಕ್ಷ ೪೬ ಸಾವಿರ ರೂಪಾಯಿ ಆಗುತ್ತದೆ. ಅಲ್ಲಿಗೆ ಇದರ ನಷ್ಟ ೧ ಲಕ್ಷ ೪೬ ಸಾವಿರ ರೂಪಾಯಿ ಆದ ಹಾಗೆ ಆಯಿತು. ಅವರಿಂದ ೧ ಲಕ್ಷ ೫೦ ಸಾವಿರ ರೂಪಾಯಿಯನ್ನು ಕಲೆಕ್ಟ್ ಮಾಡಿ ಅದನ್ನು ಡಿಪಾಸಿಟ್‌ನಲ್ಲಿ ಇಟ್ಟಿದ್ದಾರೆ.

ಇನ್ನು ಈ ಬಗ್ಗೆ 'ಯು' ಷೇಪ್ ಮಾಡುವುದಕ್ಕೆ ಯಾರು ಅನುಮತಿ ಕೊಟ್ಟಿದ್ದಾರೆ ಎಂದು ಕೇಳಿದ್ದಾರೆ. ಇದಕ್ಕೆ ಖಂಡಿತವಾಗಿಯೂ ಇಲಾಖೆಯವರು ಅನುಮತಿ ಕೊಟ್ಟಿಲ್ಲ. ಅದನ್ನು ಮಾಡುವುದಕ್ಕೆ ಫಿಲಂನವರೇ ಅನುಮತಿ ಕೊಟ್ಟಿದ್ದಾರೆ. ಈಗ ಅದರ ಮೇಲೆ ವಿಚಾರಣೆ ಆಗುತ್ತಾ ಇದೆ. ಈ ಬಗ್ಗೆ ಮೊದಲು ಇಲಾಖೆಯವರು ಸ್ಟೈಟ್ ಲೈನ್ ಆಗಿ ನಡೆಸುವುದಕ್ಕೆ ಅನುಮತಿ ಕೊಟ್ಟಿದ್ದರು. ಅವರು ಅದನ್ನು 'ಯು' ಷೇಪ್‌ಗೆ ಬದಲಾಯಿಸಿದ್ದಾರೆ. ಅಲ್ಲದೆ ಅವರು ಅದನ್ನು ಆ ದಿವಸವೂ ಮಾಡಲಿಲ್ಲಾ. ಇಲಾಖೆಯವರು ಸ್ಟೈಟ್ ಲೈನ್ ಆಗಿ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದನ್ನು ಬದಲಾಯಿಸಿ ಈ ಒಂದು ಬದಲಾವಣೆಯನ್ನು ಮರುದಿನ ಅಂದರೆ ೨೦ನೇ ತಾರೀಕು ಅವರೇ ಮಾಡಿದ್ದಾರೆ. ಹಾಗೆ ಮಾಡುವುದಕ್ಕೆ ಅವರಿಗೆ ಡೈರಕ್ಟರ್ ಆಫ್ ಫಿಲಂನವರಿಂದ ಅನುಮತಿ ಬಂದಿದೆ, ಖಂಡಿತವಾಗಿಯೂ ಇದಕ್ಕೆ ಇಲಾಖೆಯವರು ಅನುಮತಿ ಕೊಟ್ಟಿಲ್ಲ. ಈ ಬಗ್ಗೆ ನಿಮಗೆ ಕೂಲಂಕಷವಾಗಿ ಹೇಳಬೇಕಾದರೆ ಇದರ ಒಂದು ಚಿತ್ರೀಕರಣ ಮಾಡಬೇಕೇ ಬೇಡವೇ ಅನ್ನುವುದು ಬಹಳ ವರ್ಷದಿಂದಲೂ ಕೂಡ ಸರ್ಕಾರದ ಮಟ್ಟದಲ್ಲಿ ಗಣನೀಯವಾಗಿ ವಿಚಾರಣೆ ನಡೆದಿದೆ. ಕೊನೆಗೆ ಡೈರಕ್ಟರ್ ಆಫ್ ಫಿಲಂಸ್‌ನವರು ಈ ಒಂದು ಚಿತ್ರೀಕರಣವನ್ನು ಮಾಡಬೇಕು ಎಂದು ತೀರ್ಮಾನ ಮಾಡಿದರು. ಈ ಬಗ್ಗೆ ಒಂದು ಕಾನೂನು ಇದೆ. ಅದು ೧೯೭೨ರಲ್ಲಿ ಪಬ್ಲಿಕೇಷನ್ ಆಗಿದೆ. ಪುನಃ ೧೯೭೭ರಲ್ಲಿ ಇದು ಮತ್ತೆ ವಿಚಾರಣೆ ಮಾಡುವುದಕೆ ಮುಂದುವರೆಸಿದ್ದಾರೆ. ಆದುದರಿಂದ ಇದಕ್ಕೆ ವೈಯುಕ್ತಿಕವಾಗಿ ಯಾರ ಒತ್ತಾಯವೂ ಇಲ್ಲ. ದಯವಿಟ್ಟು ಮಾನ್ಯ ಸದಸ್ಯರುಗಳು ಇದನ್ನು ತಿಳಿಯಬೇಕು. ಸರ್ಕಾರದ ಒಂದು ತೀರ್ಮಾನದಂತೆ ಮತ್ತು ಕಾನೂನು ಪ್ರಕಾರ ಇದು ನಡೆದಿದೆ. ಈ ವಿಚಾರದಲ್ಲಿ ಡೈರಕ್ಟರ್ ಆಫ್ ಫಿಲಂಸ್‌ನವರಿಂದ ಬಂದಿರುವ ಒಂದು ಪತ್ರ ಇದೆ. ಇದನ್ನು ಓದಲು ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಓದುತ್ತೇನೆ. ಅವರು ಈ ಬಗ್ಗೆ ಬಹಳ ವಾಗಿ ಹೇಳಿದ್ದಾರೆ. ಏನೆಂದರೆ ನಮ್ಮ ಕರ್ನಾಟಕದಲ್ಲಿ ಇಂಥಾದ್ದು ಒಂದು ಇರಬೇಕು, ಇದು ಇಲ್ಲದೇ ಇದ್ದರೆ ಬಹಳ ತೊಂದರೆ ಆಗುತ್ತದೆ, ನಮ್ಮ ಕನ್ನಡ ಫಿಲಂಸ್‌ಗಳಿಗೆ ಬಹಳ ಅನ್ಯಾಯವಾಗುತ್ತಾ ಇದೆ. ೪೦೦ ಫಿಲಂಸ್ ತೆಗೆದಿದ್ದರಲ್ಲಿ ೨೦ ಫಿಲಂಸ್ ಮಾತ್ರ ಇದರಲ್ಲಿ ಬಂದಿದೆ ಎಂದು ಹೇಳಿದ್ದಾರೆ. ಆದುದರಿಂದ ಈ ಒಂದು ಒತ್ತಾಯದ ಮೇಲೆ ಆಹಾರ ಮತ್ತು ಅರಣ್ಯ ಇಲಾಖೆಯವರು ಹೋಮ್ ಡಿಪಾರ್ಟ್‌ಮೆಂಟಿನವರಿಗೆ ಈ ಬಗ್ಗೆ ಅನುಮತಿ ಕೊಡಬೇಕು ಎಂದು ತಿಳಿಸಿದ್ದಾರೆ. ಆದುದರಿಂದ ಈ ವಿಚಾರದಲ್ಲಿ ಡೈರಕ್ಟರ್ ಆಫ್ ಫಿಲಂಸ್‌ನವರಿಗೆ ಯಾವರೀತಿ ಮಾಡಬೇಕು ಎಂದು ಏನು ಒಂದು ಅಧಿಕಾರ ಕೊಟ್ಟಿದ್ದರೋ ಆ ಅಧಿಕಾರವನ್ನು ಅವರು ಬದಲಾಯಿಸುವುದಕ್ಕೆ ಪ್ರಯತ್ನ ಮಾಡಿದರು. ಈ ಬಗ್ಗೆ, ನಾನು ಆಗಲೇ ಹೇಳಿದ್ದೇನೆ. ಇದನ್ನು ಸೆಕ್ರಿಟೇರಿಯೇಟ್ ಮಟ್ಟದಲ್ಲಿ ಎಲ್ಲರೂ ತೀರ್ಮಾನ ಮಾಡಿ, ಪುನಃ ಪುನಃ ಇದನ್ನು ವಿಚಾರಣೆ ಮಾಡತಕ್ಕಂಥಾ ಕಾರ್ಯಕ್ಕೆ ಯಾರೂ ಹೋಗಿಲ್ಲಾ. ಆದುದರಿಂದ ಇದರಲ್ಲಿ ಡೈರಕ್ಟರ್ ಆಫ್ ಫಿಲಂಸ್‌ನವರದ್ದೇ ಒಂದು ದೊಡ್ಡ ಪಾತ್ರವಾಗಿದೆ. ಈ ಬಗ್ಗೆ ಅವರಿಂದ ಏನು ಒಂದು

ಪತ್ರ ಬಂದಿದೆ ಅದನ್ನು ಗಮನಿಸಿದರೆ ಒಳ್ಳೆಯದು. ಈ ಪತ್ರದಲ್ಲಿ ಅವರು ಬರೆದಿರುವುದನ್ನೆಲ್ಲಾ ಓದುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಮುಖ್ಯವಾದ ಅಂಶಗಳನ್ನು ಮಾತ್ರ ಈ ಸಭೆಯ ಗಮನಕ್ಕೆ ತರುತ್ತೇನೆ.

For the benefit of the hon'ble members, I shall read a letter from the Director of Films addressed to the Commissioner for Home Affairs and Secretary to Government of Karnataka, Home Department dated 24th February 1978.

"Sub: Shooting of Films in Forests National Parks/Sanctuaries Deletion of.

Ref: HD 97 PIF 77 dated 31st May 1977, 9th August 1977 and 20th February 1978.

With reference to the above, I am furnishing the following report after examining in detail the the proposals of the Chief Conservator of Forests (GL).

1. No permission has been issued by this Department in the places referred to, without the concurrence of the Forest Department.

2. Film shooting is not totally banned as per the proceedings of the XIIIth Meeting of the State Wild Life Board. More care and intensive scrutinising of the applications for permissions particularly in Wild Life Sanctuaries for such places is made only when this Department is fully convinced about the justification in adding such schemes, shooting in the above places is processed and concurrence requested and obtained. In addition to this, the production Firms are advised not to use any P. A. system, Rifle firing, Dynamite sound or crowding or teasing of fauna. Usually, an official of the Forest Department may also serve as Liaison Officer. The appointment of Zonal Field Film Supervisors of the Department of Films to serve as Liasion with the concerned Department has also been proposed in Reorganisation proposal of this Department.

3. This Department has no objection of any Kind for getting the concurrence of the Forest Department and have consultations with them.

4. In view of the spectacular achievements and reputation of the Kannada Film Industry, this Department does not agree to the idea of totally banning Film shooting in Sanctuaries and Forest areas. The natural scenes and spectacular locations of Tourist interest will be shown througout the World. Shooting for Feature Films in forest areas is just one or two percent and is therefore negligible. But even this small percentage of filming in Forest areas attracts the World attention through such Feature Films only.

Totally banning Film shooting denies the opportunity of filming by big Budget Producers. The revenue relating to Shooting Fees also goes up if big Budget Producers take up productions.

5. In conclusion, I do not contribute to the proposal of the Chief Conservator of Forests to delete National Parks, Zoo Gardens/ Sanctuaries etc., from the list issued under G. O. No. HD 31 PIF 72, dated 8th September 1972.

6. Filming in forest areas will not be done throughout the year and there is no continuous booking of the Forest lodges also. Only one or two per cent of the Producers may use forest scence in their films and even this should not be denied. Out of about 400 films produced in Karnataka for the past 12 years period, only about 20 films might have used Forest locations.

7. This Department does not refer for concurrence, all cases. Only the genuine big budget producers who agree for the conditions stipulated by the Forest Department will be referred to.

8. Only when this Department is convinced that shooting in such places is an essential part of the film then only Forest Department will be approached for concurrence and opinion. As useful permission will be issued only after obtaining concurrence of the Forest Department which is to be a little more liberal in the interest of showing our forest wealth in India and abroad ".

ಅಧ್ಯಕ್ಷರು.—ಜಿ. ಓ. ನಲ್ಲಿರುವ ವಿವರ ಇದ್ದೆ ಇದೆ, ಬೇರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಿ.

ಶ್ರೀ ಜಿ. ರಾಮೇಗೌಡ.—ಆಮೇಲೆ ಕಾಡು ಎಷ್ಟು ಸುಟ್ಟು ಹೋಯಿತು ಪಕ್ಷಿಗಳು ಎಷ್ಟು ಸುಟ್ಟು ಹೋದುವು ಜಿಂಕೆಗಳು ಎಷ್ಟು ಸುಟ್ಟು ಹೋದುವು ಎನ್ನುವ ಒಂದು ಪ್ರಶ್ನೆ ಉದ್ಭವವಾಗಿದೆ. ಇದರ ಬಗ್ಗೆ ನಾನು ಈ ಸಂದರ್ಭದಲ್ಲಿ ಹೆಚ್ಚಿಗೆ ವಿವರಗಳನ್ನು ಹೇಳುವುದಕ್ಕೆ ಬರುವುದಿಲ್ಲಾ. ಒಂದು ಸಾವಿರ ಎಕರೆಯಷ್ಟು ವಿರಿಯಾದಲ್ಲಿ, ವನ್ಯ ಮೃಗಗಳ ಪ್ರವೇಶ ಇಲ್ಲದ ಕಡೆ, ಮಳೆ ಬರುವ ಹಾಗೆ ಇಲ್ಲದೆ ಇದ್ದಂಥ ಪ್ರದೇಶದಲ್ಲಿ ವತ್ತು ನಾವು ರೀ ಪ್ಲಾಂಟೇಷನ್ ಮಾಡತಕ್ಕ ಕಡೆ ಇವರಿಗೆ ಪರ್ಮಿಷನ್ ಕೊಟ್ಟಿದ್ದೇವೆ ಆದ್ದರಿಂದ ಇಲ್ಲಿ ವನ್ಯ ಮೃಗಗಳಿಗೆ ತೊಂದರೆಯಾಗುವದಾಗಲೀ, ಪಕ್ಷಿಗಳು ಸುಡುವುದಾಗಲೀ, ಅಥವಾ ಕಾಡು ಸುಟ್ಟು ಹೋಗುವುದಾಗಲೀ ಹೇಳತಕ್ಕ ಪ್ರಶ್ನೆ ಬರುವುದಿಲ್ಲ.

ಇನ್ನು ಬೆಂಕಿ ಹಾಕುವುದಕ್ಕೆ ಪರ್ಮಿಷನ್ ಕೊಟ್ಟಿದ್ದೇವೆಯೋ ಇಲ್ಲವೇ ಎನ್ನುವ ಪ್ರಶ್ನೆ ಇದೆ. ಮಳೆ ಬಂದಾಗ ನಾವು ಎಷ್ಟು ಬೆಂಕಿ ಹಾಕಿಕೊಳ್ಳಬೇಕೋ ಮತ್ತು ಇಂಥ ಪ್ರದೇಶ ಬಂದಾಗ ಎಷ್ಟು ಬೆಂಕಿಯನು ಹಾಕಬೇಕೋ ಅಷ್ಟನ್ನು ಹಾಕಬೇಕು. ಇದರ ಬಗ್ಗೆ ನನಗೆ ವಿವರಗಳು ಬಂದಿಲ್ಲ. ಆದರೆ ಇದರ ಬಗೆ ಡಿವಿಷನ್‌ನ ಅಧಿಕಾರಿ ಒಂದು ಸ್ಪೆಶ್ಚಲ್ ಲೈನ್‌ನಲ್ಲಿ ಹೋಗಬೇಕು ಎಂದು ಹೇಳಿರುವುದು ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ವಿಚಾರಣೆ ನಡೆಯುತ್ತಾ ಇದೆ, ಅವರು ಈ ವಿಷಯದ ಬಗ್ಗೆ ಯಾವ ರೀತಿಯಲ್ಲಿ ಬದಲಾವಣೆ ಮಾಡಿದರು ಯಾವ ರೀತಿಯಲ್ಲಿ ಅಧಿಕಾರಿ ಹೇಳಿದರು ಎನ್ನುವುದರ ಬಗ್ಗೆ ವಿಚಾರಣೆ ನಡೆಯುತ್ತಾ ಇದೆ, ಈಗಲೇ ಇದರ ಬಗ್ಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಆನಂತರ, ಸಣ್ಣ ಅಧಿಕಾರಿಗಳಿಗೆ ತೊಂದರೆಯಾಯಿತು, ಇವರುಗಳನ್ನು ಪೀನಲೈಸ್ ಮಾಡಬಾರದು ಎಂದು ಹೇಳಿದ್ದಾರೆ. ಇಂಥ ಅಧಿಕಾರಿಗಳನ್ನು ಪೀನಲೈಸ್ ಮಾಡಬೇಕು ಎಂದು ಹೇಳುವ ಪರುದ್ದೇಶ ನಮಗಿಲ್ಲ. ವಿಚಾರಣೆ ನಡೆಯುತ್ತಾ ಇದೆ, ಸಂಬಂಧಪಟ್ಟವರು ಯಾರು ಯಾರು ಇದರಲ್ಲಿ

ಇನ್‌ವಾಲ್ವ್ ಆಗಿದ್ದಾರೆ ಎನ್ನುವ ಬಗ್ಗೆ ರಿಪೋರ್ಟ್ ಬಂದಮೇಲೆ ಅಂಥವರಲ್ಲಿ ಯಾರಿಗೆ ಶಿಕ್ಷೆ ಕೊಡಬೇಕು. ಯಾರಿಗೆ ಮುತ್ತೈ ಪುಸಃ ಕೆಲಸದಲ್ಲಿ ತೆಗೆದುಕೊಳ್ಳಬೇಕು ಎನ್ನುವುದನ್ನು ವಿಚಾರ ಮಾಡೇತ್ತೇವೆ. ಇದರಲ್ಲಿ ಯಾವ ತೊಂದರೆಯೂ ಇಲ್ಲ ; ಮತ್ತು ದುರುದ್ದೇಶವೂ ಇಲ್ಲ. ಅಧಿಕಾರಿಗಳು ಇದಕ್ಕೆ ಜವಾಬ್ದಾರರೇ, ಫಿಲಂ ಪ್ರಡ್ಯೂಸರ್ಸ್ ಇದಕ್ಕೆ ಜವಾಬ್ದಾರರೇ ಎನ್ನುವುದನ್ನು ತಿಳಿದುಕೊಂಡು ರಿಪೋರ್ಟ್ ಬಂದಮೇಲೆ ಇದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ನಾನು ಈ ಸಂರ್ಭದಲ್ಲಿ ಸಭೆಗೆ ಭರವಸೆ ಕೊಡುತ್ತೇನೆ.

ಶ್ರೀ ಎಚ್. ಗಂಗಾಧರ್.—ಮಾನ್ಯ ಮಂತ್ರಿಗಳು ಡೈರೆಕ್ಟರುಗಳ ಹೆಸರುಗಳೆನ್ನು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮಗೆ ಮಾನ್ಯ ಮಂತ್ರಿಗಳಿಂದ ಮುಖ್ಯವಾದ ಪ್ರಶ್ನೆಗೆ ಉತ್ತರ ಸಿಕ್ಕಲಿಲ್ಲ. ಇದರ ಬಗ್ಗೆ ವಿಚಾರಣೆ ಸರಿಯಾದ ರೀತಿಯಿಂದ ಆಗಬೇಕಾದರೆ, ಡಿಪಾರ್ಟ್‌ಮೆಂಟ್ಸ್ ಆಫೀಸರ್ಸ್‌ಗಳಿಂದ ಆದರೆ ಸರಿಯಲ್ಲ. ನ್ಯಾಯಾಂಗ ವಿಚಾರಣೆಗೆ ಸರ್ಕಾರಕ್ಕೆ ಸದಸ್ಯರುಗಳು ಸೂಚನೆ ಕೊಟ್ಟಿದ್ದಾರೆ. ಇದಕ್ಕೆ ಮಾನ್ಯ ಮಂತ್ರಿಗಳಿಂದ ಉತ್ತರ ಬರಲಿಲ್ಲ ಆದೂ ಇಲ್ಲದೇ ಹೋದರೆ ಈ ಮನೆಯ ಸದಸ್ಯರಿಂದ ಕೂಡಿದ ಒಂದು ಕಮಿಟಿಯನ್ನು ಏರ್ಪಾಡು ಮಾಡಿ ವಿಚಾರಣೆ ಮಾಡುವುದಕ್ಕೂ ಕೆಲವು ಸದಸ್ಯರುಗಳು ಸೂಚನೆ ಕೊಟ್ಟಿದ್ದಾರೆ. ಇದಕ್ಕೂ ಮಾನ್ಯ ಮಂತ್ರಿಗಳಿಂದ ಉತ್ತರವಿಲ್ಲ. ಇದರ ಬಗ್ಗೆ ಕಲಾವಿದರಲ್ಲಿ ಅದರಲ್ಲಿಯೂ ಫಿಲಂ ಪ್ರಡ್ಯೂಸರ್ಸ್‌ಗಳಿಂದ ಅಬ್ಜಕ್ಷನ್ ಬಂದಿದೆ. ತಾವುಗಳು ಸಸ್ಪೆಂಡ್ ಮಾಡಿದಂಥ ಅಧಿಕಾರಿಗಳಲ್ಲಿ ಯಾರು ತಪ್ಪು ಮಾಡಿದ್ದಾರೆ, ಯಾರ ಬಗ್ಗೆ ಪ್ರೈಮಾಫೇಸಿ ಕೇಸ್ ಇದೆ ಅವರನ್ನು ಸಸ್ಪೆಂಡ್‌ಮಾಡಬಹುದು. ತಪ್ಪು ಇಲ್ಲದೆ ಇರತಕ್ಕವರ ಮೇಲೆ ಕ್ರಮ ತೆಗೆದುಕೊಳ್ಳುವುದು ಸರಿಯಲ್ಲ. ಅವರಿಗೆ ಕೊಟ್ಟಿರತಕ್ಕ ಕಂಡೀಷನ್ ಪ್ರಕಾರ ಇದನ್ನೆಲ್ಲಾ ಸೂಪರ್‌ವೈಸ್ ಮಾಡತಕ್ಕ ಕೆಲಸವನ್ನು ಯಾರಿಗೆ ಕೊಟ್ಟಿದ್ದರು, ಅವರು ಅವರ ಕರ್ತವ್ಯದಲ್ಲಿ ಚ್ಯುತಿ ಮಾಡಿದ್ದಾರೆಯೇ ಎನ್ನುವುದನ್ನು ನೋಡಿ ಕ್ರಮ ತೆಗೆದುಕೊಳ್ಳಿ. ಚಿಕ್ಕ ಚಿಕ್ಕ ಅಧಿಕಾರಿಗಳು ಯಾರೂ ತಪ್ಪು ಮಾಡದಿದ್ದಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ತೆಗೆದುಹಾಕಬೇಕು.

ಮೂರನೆಯದು, ತಾವು ನ್ಯಾಯಾಂಗ ವಿಚಾರಣೆಗೆ ಒಪ್ಪಿದರೆ ಅನೇಕ ವಿಚಾರಗಳು ಹೊರಗೆ ಬರುತ್ತವೆ. ಸತ್ಯಾಂಶಗಳು ಹೊರಗಡೆ ಬಂದಮೇಲೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಮುಂದೆ ಈ ರೀತಿಯಾಗದಂತೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಪ್ರಶ್ನೆ ಇದೆ, ಇದರ ಬಗ್ಗೆ ನಿಯಮದಲ್ಲಿ ಏನಾದರೂ ಬದಲಾವಣೆ ಮಾಡುತ್ತೀರಾ ಎನ್ನುವ ಈ ನಾಲ್ಕೈದು ಪ್ರಶ್ನೆಗಳಿಗೆ ತಾವು ಉತ್ತರ ಕೊಡಬೇಕು.

ಶ್ರೀ ಜಿ. ರಾಮೇಗೌಡ.—ಫಿಲಂನವರು ಬೆಂಕಿಯನ್ನು ಹಾಕಿ, ಬೆಂಕಿಯನ್ನು ಆನೆಗಳನ್ನು ಓಡಿಸತಕ್ಕ ಸೀಕ್ವೆನ್ಸ್ ತೆಗೆದುಕೊಳ್ಳಬೇಕು ಮತ್ತು ಫಿಲಂಗೆ ಯು ಕೊಡಬೇಕು ಎನ್ನುವುದಕ್ಕೆ ಪರ್ಮಿಷನ್ ಇತ್ತೋ ಏನೋ ನನಗೆ ಜ್ಞಾಪಕ ಇಲ್ಲ. ಇದರ ಜೊತೆಗೆ ಆನೆಯ ಚರ್ಮ ಬಹಳ ಸೂಕ್ಷ್ಮ ಎಂದೂ ನಾನು ಕೇಳಿದ್ದೇನೆ. ಆನೆಗಳಿಗೆ ಬೇಕಿಯನ್ನು ಕಂಡರೆ ಗಾಬರಿಯಾಗುತ್ತವೆ, ಇಂಥ ಸನ್ನಿವೇಶವನ್ನು ತೆಗೆಯಬೇಕು ಇದು ಅವರ ಅವಶ್ಯಕತೆಯೋ ಏನೋ ಗೊತ್ತಿಲ್ಲ. ಇವೆಲ್ಲಾ ವಿಚಾರಗಳಿಗೂ ತನಿಖೆ ಮಾಡಿದರೆ ಒಳ್ಳೆಯದು ಅಲ್ಲವೇ ?

SRI A. LAKSHMISAGAR.—I have one more suggestion to make. After all this discussion, one thing emerges and that is if anybody is responsible in this blunder, the Minister himself must hold responsible and what punishment he wishes to inflict upon himself. There is no point in taking action against officials who are not *prima facie* or even otherwise responsible for the film shooting and subsequent action which resulted in the death of elephants. What is the punishment he wishes to inflict upon himself, *prima facie* he is responsible, because it is he who accorded permission for the filming. Let him decide or let him be kept under suspension.

ಶ್ರೀ ಜಿ. ರಾಮೇಗೌಡ.—ಸರ್ಕಾರ ಈ ವಿಚಾರದಲ್ಲಿ ೫ ಮಂದಿ ಅಧಿಕಾರಿಗಳನ್ನು ಸಸ್ಪೆಂಡ್‌ನಲ್ಲಿ ಟ್ಟಿರುವುದು ನಿಜ. ಒಬ್ಬ ಸೀನಿಯರ್ ಅಧಿಕಾರಿ, ಆ ಏರಿಯಾಕ್ಕೆ ಸಂಬಂಧಪಡದೆ ಇದ್ದವರನ್ನು ವಿಚಾರಣೆ ಮಾಡುವುದಕ್ಕೆ ಹಾಕಿದರೆ ಒಳ್ಳೆಯ ವಿಚಾರಣೆ ನಡೆಯುತ್ತದೆ. ಇದರಲ್ಲಿಯೂ ಸರಿಯಾಗಿ ನ್ಯಾಯ ದೊರಕಲಿಲ್ಲ ಎಂದರೆ ಮಾನ್ಯ ಸದಸ್ಯರು ಹೇಳತಕ್ಕ ರೀತಿಯಲ್ಲಿ ಆಮೇಲೆ ವಿಚಾರ ಮಾಡ ಬಹುದು. ಇದರ ಬಗ್ಗೆ ವರದಿ ಬರುವವರೆಗೂ ಸ್ವಲ್ಪ ಕಾಯೋಣ. ಇದರ ಜೊತೆಗೆ ಡೈರೆಕ್ಟರುಗಳ ಹೆಸರನ್ನು ಹೇಳಬೇಕು ಎಂದರೆ ಮಾನ್ಯ ಅಧ್ಯಕ್ಷರು ಆಪ್ಪಣೆ ಕೊಟ್ಟರೆ ಹೇಳುತ್ತೇನೆ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ, ಆಲ್ಲಿದ್ದಂಥ ಅಧಿಕಾರಿಗಳು ಸರಿಯಾದ ಕ್ರಮ ತೆಗೆದುಕೊಂಡಿದ್ದರೆ ಈ ಅಘಾತವನ್ನು ತಪ್ಪಿಸಬಹುದಾಗಿತ್ತು ಎನ್ನುವ ಒಂದು ಅಂಶದ ಮೇಲೆ ಅವರನ್ನು ಸಸ್ಪೆಂಡ್ ಮಾಡಿದ್ದೇವೆ. ಕಾನೂನನ್ನು ಮೀರಿ ಪ್ರಡ್ಯೂಸರ್ಸ್ ಹೇಗೆ ಇಂಥ ಸೀಕ್ವೆನ್ಸ್ ಏರ್ಪಾಡು ಮಾಡಿದರು ಎನ್ನುವುದರ ಮೇಲೆ ವಿಚಾರಣೆ ನಡೆಯುತ್ತಿದೆ. ಆ ವಿಚಾರಣೆ ನಡೆದು ಅದರ ಒಂದು ರಿಪೋರ್ಟ್ ಏನು ಬರುತ್ತದೆ ಅದನ್ನು ಸ್ಥೂಲ ವಾಗಿ ಆಲೋಚನೆ ಮಾಡಿ ಆನಂತರ ಏನು ಮಾಡಬೇಕು ಅನ್ನುವುದನ್ನು ನೋಡಿ ಮಾಡಬೇಕಾಗುತ್ತದೆ. ಅದನ್ನು ಮಾಡೋಣ. ಅದಿಲ್ಲದೆ ಈಗ ಮಂತ್ರಿಗಳೇ ರಿಜೈನ್ ಮಾಡಬೇಕು ಎಂದರೆ, ಅದು ಏನು ಕಾರಣವೋ ನನಗೆ ಗೊತ್ತಿಲ್ಲ. ದಿನವೂ ಎಷ್ಟೋ ಅಪಘಾತಗಳಾಗುತ್ತವೆ. ಅದಕ್ಕಾಗಿ...

3-30 P.M.

ಶ್ರೀ ಎ.ಲಕ್ಷ್ಮೀಸಾಗರ್.—ಇದಕ್ಕೆ ಪರವಾನಗಿ ಕೊಟ್ಟಿದ್ದು ತಾವು, ಅದಕ್ಕಾಗಿ ತಾವು ರಾಜೀನಾಮೆ ಕೊಡಬೇಕು ಎಂದು ನಾನು ಹೇಳಿದ್ದು.

ಶ್ರೀ ಜಿ. ರಾಮೇಗೌಡ.—ಇಷ್ಟೊಂದು ವಿವರಗಳನ್ನು ಕೊಟ್ಟಮೇಲೂ ಸಹ ಇದಕ್ಕೆ ನಾನೇ ಪರವಾನಗಿ ಕೊಟ್ಟಿದ್ದು ಎಂದರೆ, ಅದಕ್ಕೆ ನಾನು ಪಶ್ಚಾತ್ತಾಪ ಪಡಬೇಕಾಗುತ್ತದೆ. ೧೯೭೫ರಲ್ಲಿಯೇ ಈ ಕಾನೂನಾಗಿದೆ. ಈ ಕಾನೂನನ್ನು ಮೀರಿ ಮಂತ್ರಿಯಾಗಲಿ ಏನೂ ಮಾಡುವುದಕ್ಕಾಗುವುದಿಲ್ಲ. ಮಂತ್ರಿಯೇ ಆಗಲೀ, ಯಾರೇ ಆಗಲೀ, ಕಾನೂನು ಮೀರಿ ಹೋಗುವುದಕ್ಕಾಗುವುದಿಲ್ಲವೆಂಬ ಪ್ರಾತನ್ನು ತಾವೆಲ್ಲರೂ ಒಪ್ಪುತ್ತೀರಿ. ಈ ಬಗ್ಗೆ ಕಾನೂನೇ ಇರುವಾಗ ಕಾನೂನನ್ನು ಬಿಟ್ಟು ನಾನು ಪರ್ಮಿಷನ್ ಕೊಟ್ಟೆ ಎಂದರೆ ಅದಕ್ಕೇನೂ ಅರ್ಥವಿಲ್ಲ. ನಾನು ಈ ಮೊದಲು ಉತ್ತರ ಕೊಡುವಾಗ ಎಲ್ಲ ಅಂಶ ಗಳನ್ನು ಕೋಟ್ ಮಾಡಿ ಹೇಳಿದ್ದೇನೆ. ಅದರ ಪ್ರತಿಗಳನ್ನು ಬೇಕಾದರೆ ತಮಗೆ ಪಂಚುತ್ತೇನೆ. ಹಾಗಿರು ವಾಗ ಇದಕ್ಕೆ ಮಂತ್ರಿಗಳೇ ಕಾರಣ, ಮಂತ್ರಿಗಳೇ ಕಾರಣ ಎಂದು ಹೇಳಿದರೆ ಅದಕ್ಕೆ ಏನು ಹೇಳ ಬೇಕೋ ನನಗೆ ಗೊತ್ತಿಲ್ಲ. ಈಗ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಇದ್ದಾರೆ. ಅವರು ಯಾರೋ ಒಬ್ಬರಿಗೆ ಒಂದು ಬಸ್ಸನ್ನು ಬಾಡಿಗೆಗೆ ಕೊಡುತ್ತಾರೆ. ಆ ಬಸ್ ಏನಾದರೂ ಕೆರೆಗೆ ಬಿದ್ದು ೫೦ ಜನರು ಸತ್ತರೆ ಸಂಬಂಧಪಟ್ಟ ಮಂತ್ರಿಯೇ ಉದ್ಯೋಗದಿಂದ ಹೋಗಬೇಕೆಂದರೆ ಏನು ಅರ್ಥ ರೈಲು ಆಪಘಾತವಾಗಿ ಜನರು ಸತ್ತರೆ ರೈಲ್ವೇ ಮಂತ್ರಿಗಳೇ ಉದ್ಯೋಗದಿಂದ ಹೋಗಬೇಕು ಎಂದರೆ ಏನು ಅರ್ಥ ?

ಶ್ರೀ ಎಸ್.ಎಸ್. ಆರಕೇರಿ.—ರೈಲ್ವೇ ಆಪಘಾತವಾದಾಗ ಲಾಲ್‌ಬಹದ್ದೂರ್ ಶಾಸ್ತ್ರಿಗಳು ರಾಜೀ ನಾಮೆ ಕೊಟ್ಟಿದ್ದರು.

ಶ್ರೀ ಜಿ. ರಾಮೇಗೌಡ.—ಒಂದು ಸಮಯದಲ್ಲಿ ದುರದೃಷ್ಟವಶಾತ್ ಪ್ರಧಾನ ಮಂತ್ರಿಗಳು ಪ್ರಯಾಣ ಮಾಡುತ್ತಿದ್ದ ಏರೋಪ್ಲೇನ್ ಗದ್ದೆಯೊಳಗೇ ತೂರಿಕೊಂಡಾಗ ಪ್ರಧಾನ ಮಂತ್ರಿಗಳನ್ನು ಬಿಟ್ಟು ಬೇರೆಯವರೆಲ್ಲಾ ಸತ್ತು ಹೋದರು. ಈ ದುರಂತದ ಬಗ್ಗೆ ನಾವು ಯಾರನ್ನು ಆಕ್ಷೇಪಣೆ ಮಾಡಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.—ಆ ಬಗ್ಗೆ ತನಿಖೆಯಾಗಿದೆ. ಮತ್ತು ಆ ಪ್ರಕರಣ ನಡೆದಾಗ ಯಾರನ್ನೂ ಸಸ್ಪೆಂಡ್ ಮಾಡಿರಲಿಲ್ಲ.

ಶ್ರೀ ಜಿ. ರಾಮೇಗೌಡ.—ಪ್ರಧಾನ ಮಂತ್ರಿಗಳನ್ನು ಬಿಟ್ಟು ಎಲ್ಲರೂ ಸತ್ತು ಹೋದರು. ಇನ್ನು ಯಾರನ್ನು ಸಸ್ಪೆಂಡ್ ಮಾಡುವುದು ? ಆದಕಾರಣ ಈ ಒಂದು ಪ್ರಕರಣದಲ್ಲಿ ತಪ್ಪಿತಸ್ಥರು ಯಾರು ಎಂದು ತನಿಖೆಯ ನಂತರ ತಿಳಿದು ಬರುತ್ತದೋ ಆವರಿಗೆ ಶಿಕ್ಷೆಯಾಗಬೇಕು ಎಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳೋಣ. ಈ ಪ್ರಕರಣ ನಡೆದಾಗ ಆ ಎ.ಸಿ.ಎಫ್. ಇರಲಿಲ್ಲ, ಟೆರಿಟೋರಿಯಲ್ ಎ.ಸಿ.ಎಫ್. ಇರಲಿಲ್ಲ, ರೇಂಜ್ ಫಾರೆಸ್ಟ್ ಆಫೀಸರ್ ಇರಲಿಲ್ಲ. ಮಾಪತರು ಇದ್ದರು. ಆವರು ಏನು ಮಾಡಿದ

ಲೆಂಬುದು ಗೊತ್ತಿಲ್ಲ. ಆದಕ್ಕಾಗಿ ಇದನ್ನೆಲ್ಲಾ ತನಿಖೆ ಮಾಡಲು ಒಬ್ಬರು ಅಧಿಕಾರಿಯನ್ನು ನೇಮಕ ಮಾಡಿದ್ದೇವೆ. ಅವರು ನಿಶ್ಪಕ್ಷಪಾತದಿಂದ ಕೂಡಿರತಕ್ಕಂಥ ಅಧಿಕಾರಿಯಾಗಿದ್ದಾರೆ. ಅವರು ವಿಚಾರಣೆ ಮಾಡುತ್ತಾರೆ. ಅವರು ಈ ಬಗ್ಗೆ ವರದಿ ಕೊಟ್ಟಮೇಲೆ, ಅದನ್ನು ತಪ್ಪಿ ಗಮನಕ್ಕೆ ತರುತ್ತೇನೆ. ಅವರು ಕೊಟ್ಟ ವರದಿಯಿಂದ ತಮಗೆ ಸಮಾಧಾನವಾಗದಿದ್ದರೆ ಆಮೇಲೆ ಏನು ಮಾಡಬೇಕೆಂಬುದನ್ನು ಆಲೋಚನೆ ಮಾಡೋಣ ಎಂದು ಈ ಮಾನ್ಯ ಸಭೆಗೆ ಹೇಳುತ್ತೇನೆ.

ಶ್ರೀ ಎಚ್. ಗಂಗಾಧರನ್.—ಆ ಚಿತ್ರದ ಪ್ರೊಡ್ಯೂಸರ್ ಮತ್ತು ಡೈರೆಕ್ಟರ್‌ಗಳ ಹೆಸರುಗಳನ್ನು ತಾವು ಹೇಳಲೇ ಇಲ್ಲ.

ಶ್ರೀ ಜಿ. ರಾಮೇಗೌಡ.—ಪ್ರೊಡ್ಯೂಸರ್ ಹೆಸರು ನನಗೆ ಖಂಡಿತಾ ಗೊತ್ತಿಲ್ಲ.

Motion to elect Members to :

PAC, EC, PUC, HC, Committees on Subordinate Legislation, on Welfare of SCs/STs, in Govt. Assurance on Privileges and on Private Members Bills and Resolutions.

MR. SPEAKER.—Now the Hon. Chief Minister may move the motions standing in his name *viz.* election to various Committees and to the Senates of the Universities.

SRI D. DEVARAJ URS (Chief Minister).—Sir I move :

1. that this House do proceed to elect 12 members of the House to the Committee on Public Accounts in accordance with sub-rule (1) of rule 251 of the Rules of Procedure and Conduct of Business in the Legislative Assembly.

2. that this House do proceed to elect 15 members to the Committee on Estimates in accordance with sub-rule (i) of rule 254 of the Rules of Procedure and Conduct of Business in the Legislative Assembly

3. that this House do proceed to elect 8 Members to the House Committee in accordance with sub-rule (2) of rule 332 of the Rules of Procedure in the Legislative Assembly.

4. that this House do proceed to elect 9 members to the Committee on Subordinate Legislation in accordance with sub-rule (i) of rule 262 of the Rules of Procedure in the Legislative Assembly.

5. that this House do proceed to elect 9 members to the Committee on the welfare of Scheduled Castes/Scheduled Tribes in accordance with Rule 267 (D) of the Rules of Procedure in the Legislative Assembly.

6. that this House do proceed to elect 9 members to the Committee on Public Undertakings in accordance with rule 256 (B) of the Rules of Procedure in the Legislative Assembly.